ತುಂಬ ಆಶ್ಚರ್ಯದಲ್ಲಿ ಬಾಯಿ ತೆಗೆದುಕೊಂಡಿರುವ ಜಿ.ಬಿ. ಜೋಶಿ ಅವರ ಚಿತ್ರವನ್ನು ಅವರಿಗೆ ತೋರಿಸಿದೆ. ಅದನ್ನು ನೋಡಿ ಅವರು ರೋಮಾಂಚಿತರಾಗಿಬಿಟ್ಟರು. ಮಕ್ಕಳಿಗಿರುವ ಬೆರಗು ಅವರ ಮುಖದಲ್ಲಿ ಎದ್ದು ಕಾಣುತ್ತಿತ್ತು. ತಕ್ಷಣ ಫೋಟೊ ತೆಗೆದುಕೊಂಡು 'ಸರಸ್ವತೀ' ಎಂದು ಕೂಗಿದರು. ಪ್ರತಿಕ್ರಿಯೆ ಬರಲಿಲ್ಲ. ಆದರೆ ಕಾರ್ನಾಡರಿಗೆ ಆ ಚಿತ್ರವನ್ನು ತಕ್ಷಣವೇ ತಮ್ಮ ಪತ್ನಿಗೆ ತೋರಿಸಬೇಕು ಎಂಬ ಆತುರ. ದಡದಡ ಅಂತ ಮೆಟ್ಟಿಲಿಳಿದು ಹೋಗಿ ತೋರಿಸಿಕೊಂಡು ಮತ್ತೆ ಮೇಲೆ ಬಂದರು.

ನಾನು ಸಾಮಾನ್ಯವಾಗಿ ಫೋಟೊಶೂಟ್‌ಗೆ ಹೋಗುವಾಗ ಬ್ಯಾಕ್‌ಗ್ರೌಂಡ್‌ಗೆ ಕಟ್ಟಿಕೊಳ್ಳಲಿಕ್ಕೆ ಶಾಲನ್ನು ತೆಗೆದುಕೊಂಡು ಹೋಗುತ್ತೇನೆ. ನನ್ನ ಹೆಂಡತಿ ಉಮಾ ಎದುರಿಗೆ ಕುಳಿತುಕೊಂಡು ಅವರನ್ನು ಮಾತನಾಡಿಸುತ್ತ ಇರುತ್ತಾಳೆ. ನಾನು ಫೋಟೊ ತೆಗೆಯುತ್ತೇನೆ. ಆದರೆ ಇಲ್ಲಿ ಫೋಟೊಶೂಟ್ ಮಾಡುವ ಜಾಗದಲ್ಲಿ ಶಾಲನ್ನು ಕಟ್ಟಲಿಕ್ಕೆ ಜಾಗ ಇರಲಿಲ್ಲ. ಹಾಗಾಗಿ ಒಲ್ಲದ ಮನಸ್ಸಿನಿಂದ, 'ನೀನು ಹಿಂದೆ ಶಾಲನ್ನು ಹಿಡಿದುಕೊಂಡು ನಿಂತುಕೊ' ಎಂದು ಉಮಾಗೆ ಹೇಳಿ, ಫೋಟೊ ತೆಗೆಯುತ್ತ ಹೋದೆ.

ನನಗೆ ಸಮಾಧಾನವಾಗಲಿಲ್ಲ. ಯಾಕೆಂದರೆ ಫೋಟೊ ತೆಗೆಸಿಕೊಳ್ಳುತ್ತಿರುವವರ ಜೊತೆ ದೃಷ್ಟಿ ಸಂಪರ್ಕ ಬೆಳೆಸುವುದು ಮತ್ತು ಅವರನ್ನು ಮಾತಿಗೆಳೆಯುವ ಕೆಲಸವನ್ನು ಉಮಾ ಮಾಡುತ್ತಿದ್ದಳು. ನಾನು ಹಾಗೆ ಸಹಜವಾಗಿರುವ ಅವರ ಚಿತ್ರಗಳನ್ನು ಸೆರೆಹಿಡಿಯುತ್ತಿದ್ದೆ. ಆದರೆ ಅವತ್ತು ಉಮಾ ಶಾಲು ಹಿಡಿದುಕೊಂಡು ಕಾರ್ನಾಡರ ಹಿಂದೆ ನಿಂತಿದ್ದಳು. ಹಾಗಾಗಿ ನನಗೆ ಸಮಾಧಾನ ಆಗದೆ ಒದ್ದಾಡುತ್ತಿದ್ದೆ. ಅದು ಕಾರ್ನಾಡರಿಗೆ ತಿಳಿಯಿತು. 'ಯಾಕೆ, ಏನೋ ತೊಂದರೆ ಆಗುತ್ತಿರುವ ಹಾಗಿದೆಯಲ್ಲ?' ಎಂದು ಕೇಳಿದರು. 'ನನಗೆ ಫೋಕಸ್ ಸಿಕ್ತಾ ಇಲ್ಲ. ಎಕ್ಸ್‌ಪ್ರೆಶನ್ ತುಂಬ ಬ್ಲ್ಯಾಂಕ್ ಆಗಿದೆ' ಎಂದು ಹೇಳಿದೆ. ಅವರು ನಕ್ಕು 'ಹೌದಾ, ಅಷ್ಟೇನಾ. ನಿಮಗೆ ಯಾವ ಭಾವ ಬೇಕು ಹೇಳಿ, ಆ ಭಾವವನ್ನು ನಾನು ಆ್ಯಕ್ಟ್ ಮಾಡ್ತೀನಿ. ಐ ಆ್ಯಮ್ ಆನ್ ಆಕ್ಟರ್' ಎಂದರು. ಆ್ಯಕ್ಟ್ ಮಾಡುತ್ತ ಹೋದರು. ಅನಿವಾರ್ಯವಾಗಿ ನಾನು ಹಾಗೆಯೇ ಫೋಟೊಶೂಟ್ ಮುಂದುವರಿಸಿದೆ.

ಅಂದು ಸಂಪೂರ್ಣವಾಗಿ ನನ್ನ ಜೊತೆ ಸಹಕರಿಸಿದರು. ಮಕ್ಕಳಲ್ಲಿ ಕಾಣುವ ಬೆರಗು, ಸರಳಗುಣ ಮತ್ತು ಉತ್ಸಾಹ ಎರಡನ್ನೂ ನಾನವತ್ತು ಕಾರ್ನಾಡರಲ್ಲಿ ಕಂಡೆ. ಎಷ್ಟು ಸರಳವಾಗಿದ್ದರು ಎಂದರೆ ಫೋಟೊಶೂಟ್ ಮುಗಿದ ಮೇಲೆ ಕ್ಯಾಮೆರಾ ಟ್ರೈಪಾಡ್ ಹಿಡಿದುಕೊಂಡು ನಮ್ಮ ಜೊತೆ ಗೇಟಿನವರೆಗೆ ಬಂದು, ಉಮಾ ಸ್ಕೂಟರಿನ ಮೇಲೆ ಕೂತುಕೊಂಡ ಮೇಲೆ ಅವಳ ಕೈಗೆ ಟ್ರೈಪಾಡ್ ಕೊಟ್ಟು ವಾಪಸ್ ಹೋದರು.

ಅವರಿಗೆ ನಾನು ತೆಗೆದ ಚಿತ್ರ ತುಂಬ ಇಷ್ಟವಾಯ್ತು. ಅವರ ಪುಸ್ತಕಗಳ ಕವರ್‌ಗಳಲ್ಲಿ ಬಳಸಿಕೊಳ್ಳುವುದಾಗಿ ಹೇಳಿದರು. ಆದರೆ ನಾನು ತೆಗೆಯಬೇಕು ಎಂದುಕೊಂಡಿದ್ದ ಕಾರ್ನಾಡರ ಚಿತ್ರ ಅದಾಗಿರಲಿಲ್ಲ. ನನ್ನ ಫೋಟೊಗ್ರಫಿಯ ಮುಖ್ಯ ಉದ್ದೇಶವೇ ಈ ನಟನೆ, ಮುಖವಾಡಗಳು ಇಲ್ಲದೇ ಬೆತ್ತಲಾದಾಗ, ಆ ಮನುಷ್ಯ ಯಾರು ಎನ್ನುವುದನ್ನು ಸೆರೆಹಿಡಿಯುವುದು. ಕಾರ್ನಾಡರ ನಾಟಕಗಳ ನಾಯಕರಲ್ಲಿ ಇರುವ ಗೊಂದಲ, ಅನಿಶ್ಚಿತತೆಗಳು ಇರುವಂಥ, 'ತುಘಲಕ್'ನ ಗುಣಗಳೇನಾದರೂ ಗಿರೀಶರಲ್ಲಿ ಕಾಣಸಬಹುದೇ ಎಂಬ ಕುತೂಹಲದಲ್ಲಿಯೇ ನಾನು ಫೋಟೊಶೂಟ್‌ಗೆ ಹೋಗಿದ್ದೆ. ಆದರೆ ಅವರು ತುಂಬ ಕಾನ್ಫಿಡೆಂಟ್. ಎಲ್ಲ ವಿಷಯಗಳಲ್ಲಿಯೂ ಖಚಿತವಾಗಿದ್ದರು.

ಗೊಂದಲದ ಕಾರ್ನಾಡರನ್ನು ಸೆರೆಹಿಡಿಯಬಹುದೇ ಎಂಬ ಕುತೂಹಲದಲ್ಲಿ ಹೋದವನಿಗೆ ಅವರು ತುಂಬ ಕಾನ್ಫಿಡೆನ್ಸ್‌ನಿಂದ ಬೇಕಾದ ಭಾವವನ್ನು ಆ್ಯಕ್ಟ್ ಮಾಡಿ ತೋರಿಸಿದ್ದರು! ಅಷ್ಟೇ ಅಲ್ಲ, ಆ ಫೋಟೊ ತುಂಬ ಇಷ್ಟ ಆಯ್ತು ಎಂದು ಮೆಚ್ಚಿಕೊಂಡಿದ್ದು ಬೇರೆ. ಹಾಗಾಗಿ ನಿಜದ ಕಾರ್ನಾಡರನ್ನು ನಾನು ಹಿಡಿಯಲು ಸಾಧ್ಯವಾಗಿಲ್ಲ ಎಂಬ ಅಸಮಾಧಾನ ನನಗಿದೆ. ಅದೇ ಸಮಯದಲ್ಲಿ ಅವರ ವಿಶಿಷ್ಟ ವ್ಯಕ್ತಿತ್ವಕ್ಕೆ ಅಷ್ಟೇ ವಿಶಿಷ್ಟವಾಗಿ ಮುಖಾಮುಖಿಯಾದ ಸಮಾಧಾನವೂ ಇದೆ.